## ಈ ಸಾವು ನ್ಯಾಯವೇ?

‘ದಸರಾ ಆನೆ’ ಎಂದೇ ಪ್ರಸಿದ್ಧವಾದ ಅರ್ಜುನನ (1959–2023) ದುರ್ಮರಣ, ನಾಡನ್ನು ಇನ್ನಿಲ್ಲದಂತೆ ಕಾಡಿದ್ದು ವರ್ಷದ ಪ್ರಮುಖ ವಿದ್ಯಮಾನಗಳಲ್ಲೊಂದು. 2012ರಿಂದ 2019ರವರೆಗೆ ಚಿನ್ನದ ಅಂಬಾರಿಯನ್ನು ಹೊರುವ ಮೂಲಕ ದಸರೆಯ ಪ್ರಮುಖ ಆಕರ್ಷಣೆಯಾಗಿದ್ದ ಅರ್ಜುನ ಆನೆ, ಇತ್ತೀಚಿನ ವರ್ಷಗಳಲ್ಲಿ ಮೈಸೂರು ದಸರಾ ಆಚರಣೆಯ ಅವಿಭಾಜ್ಯ ಅಂಗವಾಗಿತ್ತು. ಕಾಡಾನೆಗಳನ್ನು ಪಳಗಿಸುವ ಅರಣ್ಯ ಇಲಾಖೆಯ ಹಲವು ಕಾರ್ಯಾಚರಣೆಯಲ್ಲಿ ಅರ್ಜುನನದು ಪ್ರಮುಖ ಪಾತ್ರವಾಗಿತ್ತು. ದುರದೃಷ್ಟವಶಾತ್, ಅಂತಹುದೇ ಕಾರ್ಯಾಚರಣೆಯೊಂದರಲ್ಲಿ ಮದ್ದಾನೆಯೊಂದಿಗಿನ ಗುದ್ದಾಟದಲ್ಲಿ ಗಾಯಗೊಂಡ ಅರ್ಜುನ ಕೊನೆಯುಸಿರೆಳೆದ. ಡಿಸೆಂಬರ್ 4ರಂದು ಸಕಲೇಶಪುರದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಕುಸಿದುಬಿದ್ದು ಸಾಯುವ ಸಂದರ್ಭದಲ್ಲೂ ತನ್ನ ಜೊತೆಗಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಮಾವುತರನ್ನು ಸುರಕ್ಷಿತವಾಗಿರಿಸುವ ಬಗ್ಗೆ ಅರ್ಜುನ ಕಾಳಜಿ ತೆಗೆದುಕೊಂಡಿದ್ದ. ಅರ್ಜುನನ ಸಾವಿನ ಬಗ್ಗೆ ಸಂಶಯದ ಮಾತುಗಳೂ ಕೇಳಿಬಂದಿದ್ದು, ಆನೆಯ ಸಾವಿನ ಬಗ್ಗೆ ಸಮಗ್ರ ತನಿಖೆ ನಡೆಯಬೇಕೆನ್ನುವ ಒತ್ತಾಯಗಳು ಕೇಳಿಬಂದಿವೆ.






### ಕಣ್ಣಿಂದ ಕದಲದ ಅರ್ಜುನ

ಈ ವರ್ಷಾಂತ್ಯದಲ್ಲಿ ಸಂಭವಿಸಿದ ದಸರಾ ಆನೆ ಅರ್ಜುನನ ಸಾವು ನನ್ನನ್ನು ಬಹುವಾಗಿ ಕಾಡಿದ್ದು.

ಮತ್ತೊಂದು ಆನೆ ಸೆರೆ ಹಿಡಿಯುವ ಸಾಹಸದಲ್ಲಿ ಅರ್ಜುನ ಪ್ರಾಣ ಕಳೆದುಕೊಂಡ. ಸರ್ಕಾರವಾಗಲಿ, ಇಲಾಖೆಯಾಗಲಿ ಈ ಸಂಗತಿಯನ್ನು ಒಂದು ಆನೆ ಸಾವು ಎಂದಷ್ಟೇ ಕಾಣುತ್ತದೆ. ಆದರೆ ಅದನ್ನು ಸಾಕಿ ಸಲುಹಿದ ಮಾವುತನ ದುಃಖ ಯಾರಿಗೂ ನಿಲುಕದ್ದು. ತನ್ನ ಕುಟುಂಬ ಸದಸ್ಯನೇ ಸತ್ತಷ್ಟು ದುಃಖ ಪಟ್ಟ ಆತ. ಅದರಲ್ಲೂ ಅರ್ಜುನನ ಅಸಹಜ ಸಾವು ಅವನಿಗೆ ಮತ್ತಷ್ಟು ನೋವು ಕೊಟ್ಟಿತ್ತು.

ಕೆಲವರಿಗೆ ಪ್ರಾಣಿಗಳನ್ನು ಸಾಕುವುದು ಶೋಕಿ, ಶ್ರೀಮಂತಿಕೆ ತೋರುವ ದಾರಿ. ಆದರೆ ಮಾವುತನದ್ದು ಹಾಗಲ್ಲ. ಮಾವುತರು ನಿಜವಾಗಿ ಆರ್ಥಿಕವಾಗಿ ಬಡವರಾಗಿರುತ್ತಾರೆ. ಯಾವುದೇ ಸೌಲಭ್ಯ ಅವರಿಗಿರುವುದಿಲ್ಲ. ಇದರ ನಡುವೆಯೇ ಅವರು ಒಂದು ಪ್ರಾಣಿಯನ್ನು ಪ್ರೀತಿಸುವ ಬಗೆ ಇದೆಯಲ್ಲಾ, ಅದು ನನಗೆ ಅತಿ ಶ್ರೇಷ್ಠ ಎನಿಸುವುದು.

ಅರ್ಜುನನ ಸಾವಾಗುತ್ತಿದ್ದಂತೆ, ಸಾಮಾಜಿಕ ಜಾಲತಾಣಗಳಲ್ಲಿ ಮತ್ತೊಂದು ವಿಡಿಯೊ ಹರಿದಾಡಿತು. ಅರ್ಜುನನ ಸಾವಿಗೆ ಕಾರಣವಾದ ಆನೆಯನ್ನು ಕೊಲೆಗಡುಕ ಎಂಬಂತೆ ಬಿಂಬಿಸುವ ವಿಡಿಯೊವದು. ನಾನುಳಿಯಬೇಕೆಂದರೆ ಎದುರಾಳಿಯನ್ನು ಸೋಲಿಸಬೇಕೆಂಬುದೇ ಕಾಡಿನ ನಿಯಮ. ಇದು ಅಸ್ತಿತ್ವದ ವಿಷಯ. ಹೀಗಿದ್ದಾಗ ಪ್ರಾಣಿಗಳನ್ನೂ ಮನುಷ್ಯನ ಬದುಕಿನ ಕ್ರಮದಲ್ಲೇ ಅಳತೆ ಹಾಕುವುದು ಎಷ್ಟು ಸರಿ?

**-ಕಲೀಂ ಉಲ್ಲಾ**
ಲೇಖಕ, ಉಪನ್ಯಾಸಕ, ವನ್ಯಜೀವಿ ಛಾಯಾಚಿತ್ರಕಾರ

## ಅಲ್ಪಾಯುಷಿ 2000 ರೂಪಾಯಿ



**2016ರ ನವೆಂಬರ್ 8ರಂದು** ಪರಿಚಯಿಸಲಾಗಿದ್ದ 2000 ರೂಪಾಯಿ ಮೌಲ್ಯದ ನೋಟುಗಳನ್ನು ಹಿಂತೆಗೆದುಕೊಂಡ ವಿದ್ಯಮಾನಕ್ಕೆ 2023 ಸಾಕ್ಷಿಯಾಯಿತು. ಕಪ್ಪುಹಣಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ 500 ಹಾಗೂ 1000 ರೂಪಾಯಿ ನೋಟುಗಳನ್ನು ಚಲಾವಣೆಯಿಂದ ಹಿಂತೆಗೆದುಕೊಂಡಿದ್ದ ಕೇಂದ್ರ ಸರ್ಕಾರ, ಆ ಪ್ರಕ್ರಿಯೆಯ ಭಾಗವಾಗಿ 2000 ರೂಪಾಯಿ ನೋಟು ಹಾಗೂ 500ರ ಹೊಸ ನೋಟುಗಳನ್ನು ಚಲಾವಣೆಗೆ ತಂದಿತ್ತು. ಆದರೆ, 2023ರ ಮೇ 20ರಂದು ₹2000 ಮುಖಬೆಲೆಯ ನೋಟುಗಳನ್ನು ಹಿಂಪಡೆಯುತ್ತಿರುವುದಾಗಿ ಸರ್ಕಾರ ಪ್ರಕಟಿಸಿತ್ತು. ಈ ನೋಟುಗಳನ್ನು ಬ್ಯಾಂಕ್‌ಗಳಲ್ಲಿ ಬದಲಿಸಿಕೊಳ್ಳಲು ಸೆ. 30ರವರೆಗೆ ಅವಕಾಶ ನೀಡಲಾಗಿತ್ತು. ನಿಗದಿತ ಸಮಯದೊಳಗೆ, 3.42 ಲಕ್ಷ ಕೋಟಿ ಮೌಲ್ಯದ ಶೇ. 96ರಷ್ಟು ನೋಟುಗಳು ಮರಳಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿದೆ. ಉಳಿದಿರುವ ನೋಟುಗಳನ್ನು ಈಗಲೂ ಸೂಕ್ತ ದಾಖಲೆಯೊಂದಿಗೆ ರಿಸರ್ವ್ ಬ್ಯಾಂಕ್ ಕಚೇರಿಗಳಲ್ಲಷ್ಟೇ ಬದಲಿಸಿಕೊಳ್ಳಲು ಅವಕಾಶವಿದೆ.




### ನೇಚರ್ ಎಡಿಟಿಂಗ್ ಆತಂಕ

ಮನುಷ್ಯ ಜೀವನ ಈ ಭೂಮಿಯ ಮೇಲೆ ಯಾವ ರೀತಿ ಇರಬಹುದು ಎನ್ನುವ ಆತಂಕವನ್ನು ಇತ್ತೀಚಿನ ತಂತ್ರಜ್ಞಾನ ಹುಟ್ಟಿಸಿದೆ. ವೈಯಕ್ತಿಕವಾಗಿ ಹೇಳುವುದಾದರೆ, ಕೃತಕ ಬುದ್ಧಿಮತ್ತೆಯ ಈ ವರ್ಷದ ಬೆಳವಣಿಗೆ ದಿಗ್ಭ್ರಮೆ ಹುಟ್ಟಿಸಿದೆ.

ನಾನು ಒಬ್ಬ ಶಿಕ್ಷಕನಾಗಿ ಓದು–ಬರಹವನ್ನು ಕಲಿಸುವ ಕೆಲಸ ಮಾಡುತ್ತೇನೆ. ಆದರೆ ಚಾಟ್‌ಜಿಪಿಟಿ ತಂತ್ರಜ್ಞಾನ ಬಳಸಿ ಬೇಕಾದ ಪ್ರಬಂಧವನ್ನು ಅದರ ಮೂಲಕವೇ ಸೃಷ್ಟಿಸಬಹುದು. ಹೀಗಿರುವಾಗ ಮುಂದಿನ ದಿನಗಳಲ್ಲಿ ಮಾನವೀಯ ಅಧ್ಯಯನಗಳ ಗತಿ ಏನಾಗಬಹುದು? ಪುಸ್ತಕವನ್ನೂ ಚಾಟ್‌ಜಿಪಿಟಿ ಮೂಲಕವೇ ತರಬಹುದು. ಯಂತ್ರ ಮಾನವನ ಮೂಲಕ ಮನುಷ್ಯನ ಅನೇಕ ಕೆಲಸ ಮಾಡಬಹುದು. ನೈಸರ್ಗಿಕ ರೂಪವನ್ನು ತಿದ್ದುವ (Nature editing), ನ್ಯಾನೊ ತಂತ್ರಜ್ಞಾನದಿಂದ ಜೀನ್ಸ್ ತಿದ್ದುವ, ನಮ್ಮ ಸುತ್ತಲಿನ ಭೌತಿಕ ಜಗತ್ತನ್ನು ತಿದ್ದುವ ಕಾಲಘಟ್ಟದಲ್ಲಿ ಇದ್ದೇವೆ. ಈ ಕಾರಣಕ್ಕೆ ತಂತ್ರಜ್ಞಾನ ಕ್ಷೇತ್ರದಲ್ಲಿ ಆದ ಬೆಳವಣಿಗೆ ಆತಂಕಕಾರಿಯಾಗಿದೆ. ಅದರಿಂದ ಒಳ್ಳೆಯದಾಗಬಹುದು ಅಥವಾ ಕೆಟ್ಟದಾಗಬಹುದು, ಆ ಪ್ರಶ್ನೆ ಬೇರೆ. ಆರಂಭದಲ್ಲೇ ಈ ಬೆಳವಣಿಗೆ ಚಿಂತೆಗೆ ಕಾರಣವಾಗಿರುವುದಂತೂ ನಿಜ. ಆ ಕಾರಣಕ್ಕೆ ಈ ಚರ್ಚೆ ಮುಖ್ಯ ಆಗುತ್ತದೆ.

**-ಎನ್‌.ಎಸ್‌. ಗುಂಡೂರ**
ಪ್ರಾಧ್ಯಾಪಕ, ವಿಮರ್ಶಕ